ಇ. ಸರ್ಕಾರಿ ಜಮೀನಿನಲ್ಲಿ ಹಾಗೂ ಖಾಸಗಿ ಜಮೀನಿನಲ್ಲಿ ಮತ್ತು ಕಂದಾಯ ಜಮೀನಿನಲ್ಲಿ ನಡೆಯುತ್ತಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಅ. ಮೈಸೂರು ಜಿಲ್ಲೆಯಲ್ಲಿ ಪರವಾನಗಿ ಇಲ್ಲದೆ ನಡೆಯುತ್ತಿರುವ 13 ಗಣಗಾರಿಕೆಗಳನ್ನು ಪತ್ತೆ ಹಚ್ಚಲಾಗಿದೆ.

ಆ. ಮೇಲಿನ 13 ಪ್ರಕರಣಗಳಲ್ಲಿ ಅನಧಿಕೃತ ಗಣಿಗಾರಿಕೆಯಲ್ಲಿ ತೊಡಗಿದ್ದವರಿಂದ ಹಾಗೂ ಅನಧಿಕೃತವಾಗಿ ಖನಿಜ ಸಾಗಣೆ ಮಾಡುತ್ತಿದ್ದರಿಂದ 17,500.00 ರೂ. ದಂಡವಾಗಿ ವಿಧಿಸಲಾಗಿದೆ. ಅಲ್ಲದೆ, ಗಣಿಗಾರಿಕೆ ಪರವಾನಗಿ ಅರ್ಜಿಗಳನ್ನು ಪಡೆದು ಅನಧಿಕೃತ ಗಣಿಗಾರಿಕೆಗಳನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳ ಸಹಯೋಗದೊಂದಿಗೆ ಅನಧಿಕೃತ ಗಣಿಗಾರಿಕೆ ಮುಂದುವರಿಯದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಇ. ಮೈಸೂರು ಜಿಲ್ಲೆಯಲ್ಲಿ ಸರ್ಕಾರಿಃಕಂದಾಯ ಜಮೀನಿನಲ್ಲಿ 211 ಪ್ರದೇಶಗಳು ಮತ್ತು ಖಾಸಗೀ ಜಮೀನಿನಲ್ಲಿ 68 ಪ್ರದೇಶಗಳು.

ರೇಷ್ಮೆ ಮಾರುಕಟ್ಟೆಯಲ್ಲಿ ಅವ್ಯವಹಾರ

1794(2120): ಶ್ರೀ **ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ)** : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಹಾಗೂ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು? ಮತ್ತು ಅವರು ಯಾರು ಯಾರು

ಆ. ಸದರಿ ಮಾರುಕಟ್ಟೆಗಳಲ್ಲಿ ಮತ್ತು ವಿನಿಮಯ ಕೇಂದ್ರಗಳಲ್ಲಿ ನಡೆಯುವ ಅಕ್ರಮ ವ್ಯವಹಾರ ತಪ್ಪಿಸುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಅ. ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ 5.

ವಿವರ ಕೆಳಕಂಡಂತಿದೆ.

ಅಧಿಕಾರಿ ಹೆಸರು ಶ್ರೀಯುತರು	ಕಾರ್ಯನಿರ್ವಹಿಸುತ್ತಿರುವ ಸ್ಥಳ	ಯಾವಾಗಿನಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ
1. ಬಾಲಕೃಷ್ಣ ಹೆಚ್.ಸಿ ಪತ್ರಾಂಕಿ ವ್ಯವಸ್ಥಾಪಕರು	ರೇಷ್ಮೆ ಗೂಡಿನ ಮಾರುಕಟ್ಟೆ ಕನಕಪುರ	14.10.96
2. ಸಿದ್ದೇಗೌಡ ಕೆ.ಸಿ. ಪತ್ರಾಂಕಿತ ವ್ಯವಸ್ಥಾಪಕರು	ರೇಷ್ಮೆ ಗೂಡಿನ ಮಾರುಕಟ್ಟೆ ಕೊಳ್ಳೇಗಾಲ	12.6.96
3. ಶಫೀಕ್ ಅಹ್ಮದ್ ಪತ್ರಾಂಕಿತ ವ್ಯವಸ್ಥಾಪಕರು	ರೇಷ್ಮೆ ಗೂಡಿನ ಮಾರುಕಟ್ಟೆ ಕೋಲಾರ	30.09.96
4. ವೆಂಕಟಪ್ಪ ಬಿ. ರೇಷ್ಮೆ ಸಹಾಯಕ ನಿರ್ದೇಶಕರು	ರೇಷ್ಮೆ ಗೂಡಿನ ಮಾರುಕಟ್ಟೆ ಕೋಲಾರ	04.06.98

5. ಈಶ್ವರಪ್ಪ ಎನ್. ರೇಷ್ಮೆ ಗೂಡಿನ 19.08.98
ರೇಷ್ಮೆ ಸಹಾಯಕ ನಿರ್ದೇಶಕರು ಮಾರುಕಟ್ಟೆ ಚಿಂತಾಮಣಿ

ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಮೂರು ವರ್ಷಗಳಿಗಿಂತ ಹೆಚ್ಚಿಗೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಯಾರು ಇರುವುದಿಲ್ಲ.

ಆ. ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಅಧಿಕಾರಿಗಳು ಮತ್ತು ನೌಕರರು ಅನುಸರಿಬೇಕಾದ ಅಂಶಗಳ ಪಟ್ಟಿಯನ್ನು ಅನುಬಂಧ ನೀಡಿದೆ.

ಅನುಬಂಧ

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಮಾಡಬೇಕಾದ ಮತ್ತು ಮಾಡಬಾರದ ಅಂಶಗಳ ಪಟ್ಟಿ

ಕ್ರ. ಸಂ.	ವಿಷಯ	ಮಾಡಬೇಕಾಗಿರುವುದು	ಮಾಡಬಾರದ್ದು
1.	ಮಾರುಕಟ್ಟೆಗೆ ಪ್ರವೇಶಕ್ಕೆ ಅವಕಾಶ	ಗೂಡು ವಹಿವಾಟಿಗೆ ಸಂಬಂಧಿಸಿದವರಿಗೆ ಮಾತ್ರ	ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶ ಬೇಡ
2.	ಅನುಜ್ಞಾ ಪತ್ರ ಹೊಂದಿರುವುದು	ರೈತರು ಮತ್ತು ರೀಲರುಗಳಿಗೆ ಕಡ್ಡಾಯಗೊಳಿಸಬೇಕು	ಅನುಜ್ಞಾಪತ್ರ ಹೊಂದಿಲ್ಲ-ದಿರುವವರಿಗೆ ಪ್ರೋತ್ಸಾಹ ನೀಡಬಾರದು
3.	ಹರಾಜು ಚೀಟಿ ನೀಡುವುದು.	ಗೂಡನ್ನು ರೈತರು ತಂದ ಕೂಡಲೇ ನೀಡಬೇಕು	ವಿಳಂಬ ಸಲ್ಲದು
4.	ರೇಷ್ಮೆ ಕೃಷಿ ಸಂಚಿಕೆ	ರೈತರು ಇಚ್ಚಿಸಿದಲ್ಲಿ ನೀಡುವುದು	ರೈತರಿಗೆ ಬಲವಂತವಾಗಿ ನೀಡುವುದು
5.	ಸಿಬ್ಬಂದಿ ಹೊಂದಿರುವ ಸ್ವಂತ ಹಣದ ಬಗ್ಗೆ	ವಹಿವಾಟು ಪ್ರಾರಂಭಕ್ಕೆ ಮುನ್ನ ಘೋಷಿಸಬೇಕು ಹಾಗೂ ದಿನದ ಕೊನೆಯಲ್ಲಿ ದೃಢೀಕರಿಸಬೇಕು.	ಘೋಷಿತ ಮೊತ್ತಕ್ಕಿಂತ ಹೆಚ್ಚು ಇರಬಾರದು
6.	ಗುರುತಿನ ಚೀಟಿ ಧರಿಸುವುದು	ಸಿಬ್ಬಂದಿ ಹಾಗೂ ರೀಲರುಗಳಿಗೆ ಕಡ್ಡಾಯಗೊಳಿಸಬೇಕು	ಗುರುತಿನ ಚೀಟಿ ಧರಿಸುವ ಬಗ್ಗೆ ವಿನಾಯಿತಿ ನೀಡಬಾರದು
7.	ಮುಂಗಡ ಹಣ	ಅಧಿಕೃತ ರೀಲರುಗಳಿದ ಮುಂಗಡ ಹಣ ಪಡೆದು ಅಂತಹ ರೀಲರು-ಗಳು ಮಾತ್ರ ಹರಾಜಿನಲ್ಲಿ ಭಾಗ ವಹಿಸಲು ಅನುಮತಿ ನೀಡಬೇಕು	ಮುಂಗಡ ಹಣ ಕಟ್ಟದ ರೀಲರು-ಗಳಿಗೆ ಹರಾಜಿನಲ್ಲಿ ಭಾಗ ವಹಿಸಲು ಅನುಮತಿಸಬಾರದು
8.	ಹರಾಜು ಪ್ರಾರಂಭಿಸುವುದು	ಮೊದಲನೇ ಹರಾಜನ್ನು ಕರಾರು ವಾಕ್ಯಾಗಿ ಬೆಳಿಗ್ಗೆ 10-30ಕ್ಕೆ ಪ್ರಾರಂಭಿಸಬೇಕು	ಹರಾಜನ್ನು ತಡವಾಗಿ ಪ್ರಾರಂಭಿಸಬಾರದು

ಕ್ರ. ಸಂ.	ವಿಷಯ	ಮಾಡಬೇಕಾಗಿರುವುದು	ಮಾಡಬಾರದ್ದು
9.	ಹರಾಜು ಕೂಗುವುದು	ನಿಧಾನವಾಗಿ, ಸ್ಪಷ್ಟವಾಗಿ ಎಲ್ಲರಿಗೂ ಕೇಳುವಂತಿರಬೇಕು	ಅವಸರ ಹಾಗೂ ಅಸ್ಪಷ್ಟ ವಾಗಿರಬಾರದು
10.	ಹರಾಜು ಚೀಟಿ ಯಲ್ಲಿ ದರ ನಮೂ-ದಿಸುವುದು	ರೈತರು ದರವನ್ನು ಒಪ್ಪಿದ ನಂತರ ನಮೂದಿಸಬೇಕು ಒಪ್ಪಿಗೆಯಾಗಿ-ರುವುದಕ್ಕೆ ರೈತರ ಸಹಿಪಡೆಯ ಬೇಕು.	ರೈತರಿಗೆ ಒಪ್ಪಿಗೆಯಾಗದಿದ್ದಲ್ಲಿ ನಮೂದಿಸಬಾರದು
11.	ಗೂಡಿನ ತೂಕ	ಪಾರದರ್ಶಕ ಹಾಗೂ ಕಾರಾರು ವಾಕ್ಯಾಗಿರಬೇಕು	ತೂಕದಲ್ಲಿ ಏರು ಪೇರುಗಳಿರ ಬಾರದು
12.	ಹಣ ಪಾವತಿ	ಗೂಡಿನ ತೂಕವಾದ ಕೂಡಲೇ ರೈತರಿಗೆ ಹಣ ಪಾವತಿಸಬೇಕು	ಹಣ ಪಾವತಿಯಲ್ಲಿ ಅನಗತ್ಯ ವಿಳಂಬ ಬೇಡ
13.	ಬಿತ್ತನೆ ಗೂಡು	ಕಡ್ಡಾಯವಾಗಿ ಪರೀಕ್ಷೆ ಮಾಡಿ ರೋಗರಹಿತರಾಗಿರುವುದನ್ನು ದೃಢಿಪಡಿಸಿಕೊಳ್ಳಬೇಕು.	ಪರೀಕ್ಷೆ ಮಾಡದೆ ವಹಿವಾಟು ಮಾಡಬಾರದು
14.	ಗೇಟ್ ಪಾಸ್	ರೀಲರುಗಳು ಖರೀದಿಸಿದ ಗೂಡಿನ ಬಾಬ್ತು ಪೂರ್ಣ ಪಾವತಿ ನಂತರವೇ ನೀಡಬೇಕು	ಗೇಟ್ ಪಾಸ್ ನೀಡದೆ ಗೂಡು ಹೊರಗೆ ಹೋಗಬಾರದು
15.	ಅನುಪಯುಕ್ತ ವಸ್ತುಗಳು	ಪ್ರತಿ ವರ್ಷ ದಾಸ್ತಾನು ಪರಿಶೀಲನೆ ಮಾಡಿಸಿ ಅನುಪಯುಕ್ತ ವಸ್ತು ಗಳನ್ನು ನಿಯಮಾನುಸಾರ ವಿಲೇವಾರಿ ಮಾಡಬೇಕು.	ದಾಸ್ತಾನು ಮಾಡಬಾರದು
16.	ಮಾರುಕಟ್ಟೆ ಬಗ್ಗೆ ದೂರು	ರೈತರು ಮತ್ತು ರೀಲರುಗಳ ಸಮಿತಿಯಲ್ಲಿ ಪರಿಶೀಲನೆಯಾಗ ಬೇಕು	ದೂರುಗಳಿಗೆ ಅವಕಾಶ ನೀಡಬಾರದು
17.	ಮಹಿಳಾ ಬೆಳೆಗಾರರು	ಗೂಡು ಹರಡಲು ಪ್ರತ್ಯೇಕ ಸ್ಥಳಾವಕಾಶ ಹಾಗೂ ಹಣ ಪಾವತಿಯಲ್ಲಿ ಮೊದಲ ಆದ್ಯತೆ ನೀಡಬೇಕು	ಮಹಿಳಾ ಬೆಳೆಗಾರರ ಹರಾಜು ಹಾಗೂ ಹಣ ಪಾವತಿಯಲ್ಲಿ ಅನಗತ್ಯ ವಿಳಂಬ ಇರಬಾರದು
18.	ಸಿಬ್ಬಂದಿ	ಇಲಾಖೆಯ ಅಧಿಕೃತ ಸಿಬ್ಬಂದಿ ಯವರು ಮಾತ್ರ ಅವರಿಗೆ ಹಂಚಿಕೆ ಮಾಡಿರುವ ಮಾರುಕಟ್ಟೆ ಕೆಲಸ ಕಾರ್ಯಗಳನ್ನು ನಿರ್ವಹಿಸ ಬೇಕು	ಅನಧಿಕೃತ ವ್ಯಕ್ತಿಗಳಿಂದ ಮಾರು-ಕಟ್ಟೆ ಕೆಲಸ ಕಾರ್ಯಗಳನ್ನು ಮಾಡಿಸಬಾರದು

ಕ್ರ. ಸಂ.	ವಿಷಯ	ಮಾಡಬೇಕಾಗಿರುವುದು	ಮಾಡಬಾರದ್ದು
19.	ರೊಟೇಷನ್ ಪದ್ಧತಿ	ರೊಟೇಷನ್ ಪದ್ಧತಿ ಪ್ರಕಾರ ಸಿಬ್ಬಂದಿಯವರು ಕಾರ್ಯ ನಿರ್ವಹಿಸತಕ್ಕದ್ದು.	ಸಿಬ್ಬಂದಿಯವರಿಗೆ ನಿರಂತರವಾಗಿ ಒಂದೇ ಕಾರ್ಯ ನಿರ್ವಹಿಸಲು ಅವಕಾಶ ನೀಡಬಾರದು.
20.	ಸಮಯ ಪಾಲನೆ	ಮಾರುಕಟ್ಟೆ ಕಾರ್ಯಾಚರಣೆ ಸಮಯದಲ್ಲಿ ಎಲ್ಲಾ ಸಿಬ್ಬಂದಿಯವರು ಕರ್ತವ್ಯದ ಮೇಲೆ ಹಾಜರಿರುವುದು	ಮಾರುಕಟ್ಟೆ ಕಾರ್ಯಾಚರಣೆ ಸಮಯದಲ್ಲಿ ಸಿಬ್ಬಂದಿಯವರು ಗೈರುಹಾಜರಾಗಬಾರದು
21.	ಸಲಹೆ ನೀಡುವುದು	ರೇಷ್ಮೆ ಬೆಳೆಗಾರರು, ರೀಲರುಗಳ ಸಮಸ್ಯೆಗಳಿಗೆ ಸ್ಪಂದಿಸಿ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳನ್ನು ನೀಡುವುದು	ರೇಷ್ಮೆ ಬೆಳೆಗಾರರು, ರೀಲರುಗಳ ಸಮಸ್ಯೆ ಬಗ್ಗೆ ಮಾರ್ಗದರ್ಶನ ಕೋರಿದಾಗ ತಿರಸ್ಕರಿಸಬಾರದು.

ಚಾಮರಾಜನಗರ ಜಿಲ್ಲೆಯಲ್ಲಿ ಮುಚ್ಚಿರುವ ಸಕ್ಕರೆ ಕಾರ್ಖಾನೆ

1795(2253): **ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ)** : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಚಾಮರಾಜನಗರ ಜಿಲ್ಲೆಯ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ಮುಚ್ಚಿರುವುದು ಹಾಗೂ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಬಂದಿದ್ದರೆ ಪುನರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಮತ್ತು ಯಾವಾಗ ಪ್ರಾರಂಭಿಸಲಾಗುವುದು?

ಇ. ರೈತರಿಗೆ ಬಾಕಿ ಹಣ ಸಂಪೂರ್ಣ ಬಡ್ಡಿ ಸಹಿತ ಪಾವತಿಸಲಾಗಿದೆಯೇ? ಅಸಲು ಮತ್ತು ಬಡ್ಡಿ ವಿವರ ನೀಡುವುದು.

ಶ್ರೀ ಎಂ. ಮಹದೇವ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಬಂದಿದೆ.

ಆ. ಮಹದೇಶ್ವರ ಸಕ್ಕರೆ ಕಾರ್ಖಾನೆ (ನಿ) ಕುಂತೂರು, ಚಾಮರಾಜನಗರ ಜಿಲ್ಲೆ, ಎಂಬ ಖಾಸಗಿ ವಲಯದ ಸಕ್ಕರೆ ಕಾರ್ಖಾನೆಯು 2000-01ನೇ ಸಾಲಿಗೆ ಕಬ್ಬು ಬೆಳೆಗಾರರಿಗೆ ನೀಡಲು ಬಾಕಿ ಇದ್ದ ರೂ. 12,18,05,546.00 ಸಕಾಲದಲ್ಲಿ ಪಾವತಿ ಮಾಡದೆ ಇದ್ದುದರಿಂದ ಈ ಬಗ್ಗೆ ತೆಗೆದುಕೊಂಡ ಆಡಳಿತಾತ್ಮಕ ಕ್ರಮಗಳು ಫಲಕಾರಿಯಾಗದೇ ಕಬ್ಬು ನಿಯಂತ್ರಣ ಆದೇಶದ ಕಲಂ 3(8) ರನ್ವಯ ಸದರಿ ಮೊತ್ತವನ್ನು ಭೂ ಕಂದಾಯದ ಬಾಕಿಯಂತೆ ಬಡ್ಡಿ ಸಹಿತ ವಸೂಲ್ಮಾಡಿ ಕಬ್ಬು ಬೆಳೆಗಾರರಿಗೆ ಪಾವತಿಸಲು ಸಕ್ಕರೆ ನಿರ್ದೇಶಕರು ಆದೇಶ ನೀಡಿದರು. ಈ ಆದೇಶಕ್ಕೆ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಿಂದ ರಿಟ್ ಅರ್ಜಿ ಸಂಖ್ಯೆ: 38636:01 ಇದರಲ್ಲಿ ತಡೆಯಾಜ್ಞೆ ಬಂದು ಕೆಲವೊಂದು ಮಧ್ಯಂತರ ಆದೇಶವಾದ ನಂತರ ಅಂತಿಮವಾಗಿ ರಿಟ್ ಅರ್ಜಿ ವಜಾ ಮಾಡಲ್ಪಟ್ಟಿತು.